# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 344
2. ಮಾನ್ಯ ಸದಸ್ಯರ ಹೆಸರು : ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ)
3. ಉತ್ತರಿಸಬೇಕಾದ ದಿನಾಂಕ : 18-07-2024
4. ಉತ್ತರಿಸುವ ಸಚಿವರು : ಮಾನ್ಯ ಉಪ ಮುಖ್ಯಮಂತ್ರಿಗಳು

<table>
<tr><th>ಕ್ರ. ಸಂ.</th><th>ಪ್ರಶ್ನೆಗಳು</th><th>ಉತ್ತರಗಳು</th></tr>
<tr><td>(ಅ)</td><td>ಮಂಡ್ಯ ಜಿಲ್ಲೆ ಕೃಷ್ಣ ರಾಜ ಸಾಗರ ಜಲಾಶಯ (ಅಣೆಕಟ್ಟು)ಕ್ಕೆ ಅಳವಡಿಸಲಾಗಿರುವ ಗೇಟುಗಳ ಒಟ್ಟು ಸಂಖ್ಯೆ ಎಷ್ಟು; ಯಾವ ಯಾವ ಹಂತದ ಅಡಿ ನೀರಿಗೆ ಎಷ್ಟು ಗೇಟ್‌ಗಳನ್ನು ಅಳವಡಿಸಲಾಗಿದೆ.</td><td>ಕೃಷ್ಣರಾಜಸಾಗರ ಅಣೆಕಟ್ಟೆಗೆ 173 ಗೇಟುಗಳನ್ನು ಅಳವಡಿಸಿದ್ದು, ಅದರ ವಿವರಗಳು ಈ ಕೆಳಗಿನಂತಿವೆ;
<table>
<tr><th>ಕ್ರ.ಸಂ</th><th>ಗೇಟುಗಳ ವಿವರ (ಅಡಿಗಳಲ್ಲಿ)</th><th>ಗೇಟುಗಳ ಸಂಖ್ಯೆ</th></tr>
<tr><td>1</td><td>+106′</td><td>40</td></tr>
<tr><td>2</td><td>+103′</td><td>48</td></tr>
<tr><td>3</td><td>+114′</td><td>48</td></tr>
<tr><td>4</td><td>+80′</td><td>16</td></tr>
<tr><td>5</td><td>+60′ VC</td><td>3</td></tr>
<tr><td>6</td><td>+50′</td><td>3</td></tr>
<tr><td>7</td><td>+12′</td><td>8</td></tr>
<tr><td>8</td><td>RBLL</td><td>1</td></tr>
<tr><td>9</td><td>Varuna</td><td>1</td></tr>
<tr><td>10</td><td>+53′</td><td>4</td></tr>
<tr><td>11</td><td>+40′</td><td>1</td></tr>
<tr><td></td><td>ಒಟ್ಟು</td><td>173</td></tr>
</table>
</td></tr>
<tr><td>(ಆ)</td><td>ಜಲಾಶಯದ ನಿರ್ಮಾಣದ ನಂತರ ಗೇಟುಗಳ ಆಧುನೀಕರಣ ಕಾಮಗಾರಿ ನಡೆದಿದೆಯೇ; ಅಥವಾ ದುರಸ್ತಿ ಕಾರ್ಯಗಳಿಗಷ್ಟೇ ಸೀಮಿತವಾಗಿತ್ತೆ; (ಸಂಪೂರ್ಣ ವಿವರ ನೀಡುವುದು)</td><td rowspan="2">ಜಲಾಶಯ ನಿರ್ಮಾಣದ ನಂತರ ಗೇಟುಗಳ ಆಧುನೀಕರಣ ಕಾಮಗಾರಿಯು ಕೈಗೊಳ್ಳಲಾಗಿದೆ ಹಾಗೂ ಜೊತೆಗೆ ಪ್ರತಿ ವರ್ಷವೂ ಅಗತ್ಯ ನಿರ್ವಹಣೆ ಕಾಮಗಾರಿಯನ್ನು ಅನುದಾನದ ಲಭ್ಯತೆಯ ಆಧಾರದ ಮೇಲೆ ಮುಂಗಾರಿಗೂ ಮುಂಚಿತವಾಗಿ ನಿರ್ವಹಿಸಲಾಗುತ್ತಿದೆ. ಜಲಾಶಯಕ್ಕೆ ಅಳವಡಿಸಲಾಗಿರುವ ಗೇಟುಗಳು 90 ವರ್ಷಗಳಾಗಿದ್ದು, ಈ ಕೆಳಕಂಡ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ;
<table>
<tr><th>ಕ್ರ. ಸಂ</th><th>ವಿವರಗಳು</th><th>ಮೊತ್ತ (ರೂ. ಕೋಟಿಗಳಲ್ಲಿ)</th></tr>
<tr><td>(ಅ)</td><td>Under State Fund : 22 ಸಂಖ್ಯೆ ಗೇಟುಗಳು (ಕಾಮಗಾರಿ ಪೂರ್ಣಗೊಂಡಿದೆ)</td><td></td></tr>
<tr><td>1</td><td>+80 Ft level -16 Nos – (2011-12)</td><td>8.50</td></tr>
<tr><td>2</td><td>Visveshwaraya Canal /VC +60 Ft Level -3 Nos & +50 ft level – 2013-14ನೇ ಸಾಲಿನಲ್ಲಿ 03 Nos ಗೇಟುಗಳ ಬದಲಾವಣೆ</td><td>2.70</td></tr>
<tr><td></td><td>ಒಟ್ಟು (ಅ):</td><td>11.20</td></tr>
<tr><td>(ಆ)</td><td>Under DRIP World Bank fund (ಕಾಮಗಾರಿ ಪ್ರಗತಿಯಲ್ಲಿದೆ)</td><td></td></tr>
<tr><td>1</td><td>2019-20 ನೇ ಸಾಲಿನಲ್ಲಿ ಕೈಗೆತ್ತಿಕೊಳ್ಳಲಾಗಿರುವ Replacement of 136 Gates:-<br>a) +103 Ft level ಗೇಟುಗಳು: 48 ಸಂ.<br>b) +106 Ft level ಗೇಟುಗಳು: 40 ಸಂ.<br>c) +114 Ft level ಗೇಟುಗಳು: 48 ಸಂ.</td><td>65.60</td></tr>
<tr><td></td><td>ಒಟ್ಟು (ಅ)+(ಆ):</td><td>76.80</td></tr>
</table>
</td></tr>
<tr><td>(ಇ)</td><td>ಜಲಾಶಯಕ್ಕೆ ಅಳವಡಿಸಲಾಗಿರುವ ಗೇಟುಗಳ ಅವಧಿ ಎಷ್ಟು; ಒಟ್ಟು ಎಷ್ಟು ಗೇಟುಗಳನ್ನು ಆಧುನೀಕರಣಗೊಳಿಸಲು ಉದ್ದೇಶಿಸಲಾಗಿದೆ; ಈವರೆವಿಗೂ ಎಷ್ಟು ಗೇಟುಗಳನ್ನು ಯಾವ ಯಾವ ವರ್ಷದಲ್ಲಿ ಆಧುನೀಕರಣಗೊಳಿಸಲಾಗಿದೆ; ಹಾಗೂ ಇದಕ್ಕೆ ಭರಿಸಲಾದ ಹಣಕಾಸಿನ ವೆಚ್ಚ ಎಷ್ಟು; (ಸಂಪೂರ್ಣ ವಿವರ ನೀಡುವುದು)</td></tr>
</table>

Scanned with OKEN Scanner

| ಕ್ರ. ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| (ಈ) | ಇನ್ನೂ ಎಷ್ಟು ಗೇಟುಗಳನ್ನು ಆಧುನೀಕರಣ ಮಾಡಬೇಕಿದೆ; ಇದಕ್ಕೆ ಅಗತ್ಯವಿರುವ ಅನುದಾನ ಎಷ್ಟು; ಗೇಟುಗಳ ಆಧುನೀಕರಣದಿಂದ ತಡೆಬಹುದಾದ ನೀರಿನ ಸೋರಿಕೆ ಪ್ರಮಾಣ ಎಷ್ಟು; | ಅಣೆಕಟ್ಟೆಯ ಬಹುತೇಕ ಎಲ್ಲಾ ಗೇಟುಗಳನ್ನು ಆಧುನೀಕರಣಗೊಳಿಸಲಾಗಿದ್ದು, RBLL ಕಾಲುವೆ 01 ಗೇಟ್‌ನ್ನು ಆಧುನೀಕರಣಗೊಳಿಸಬೇಕಾಗಿದೆ. ಇದಕ್ಕಾಗಿ ರೂ.2.50 ಕೋಟಿ ಅನುದಾನ ಅಗತ್ಯವಿದೆ. ಸದರಿ ಗೇಟ್‌ನ್ನು ಆಧುನೀಕರಣಗೊಳಿಸುದರಿಂದ ಸುಮಾರು 50 ಕ್ಯೂಸೆಕ್ಸ್ ನೀರಿನ ಸೋರಿಕೆ ತಡೆಯಬಹುದಾಗಿದೆ. ಉಳಿದಂತೆ, 2 ಗೇಟುಗಳು ಸುಸ್ಥಿತಿಯಲ್ಲಿ ಕಾರ್ಯನಿರ್ಹಿಸುತ್ತಿವೆ. |
| (ಉ) | ಜಲಾಶಯದ ಗೇಟುಗಳ ಆಧುನೀಕರಣ ಕಾಮಗಾರಿ ಪ್ರಸ್ತುತ ಯಾವ ಹಂತದಲ್ಲಿದೆ; ವಿಳಂಬಕ್ಕೆ ಕಾರಣಗಳೇನು; | ಅಣೆಕಟ್ಟಿನ ಎಲ್ಲಾ 158 ಗೇಟುಗಳನ್ನು ಆಧುನೀಕರಣಗೊಳಿಸಲಾಗಿದ್ದು, ಸ್ವಯಂ ಚಾಲಿತ ಗೇಟುಗಳನ್ನಾಗಿ ಮಾರ್ಪಾಡು ಮಾಡುವ ಉದ್ದೇಶದಿಂದ ಪ್ರತ್ಯೇಕ SCADA (Supervisory Control And Data Acquisition) Control Room ನಿರ್ಮಿಸಬೇಕಾಗಿದೆ. ಈ ಕಾಮಗಾರಿಯನ್ನು ಡ್ರಿಪ್ ಹಂತ-2 ರಲ್ಲಿ ಕೈಗೆತ್ತಿಕೊಳ್ಳಲಾಗಿದ್ದು, ಕಾಮಗಾರಿ ಪ್ರಗತಿಯಲ್ಲಿದೆ.<br><br>ಕೋವಿಡ್-19 ರ ಮೊದಲನೇ ಅಲೆ ಹಾಗೂ ಎರಡನೇ ಅಲೆ, ಈ ಅವಧಿಯಲ್ಲಿ ಕಾಮಗಾರಿಗಾಗಿ ಅವಶ್ಯವಿರುವ ಆಕ್ಸಿಜನ್ ಕೊರತೆ, ಕೇಂದ್ರ ಜಲ ಆಯೋಗದಿಂದ ಕಾಮಗಾರಿಯ ವಿನ್ಯಾಸಕ್ಕೆ ಅನುಮೋದನೆ ದೊರೆಯುವಲ್ಲಿನ ವಿಳಂಬ - ಈ ಕಾರಣಗಳಿಂದ ಕಾಮಗಾರಿಯನ್ನು ಪೂರ್ಣಗೊಳಿಸುವಲ್ಲಿ ವಿಳಂಬವಾಗಿದೆ. |
| (ಊ) | ತಾಂತ್ರಿಕ ಕಾರಣಕ್ಕೆ ಮುಚ್ಚಲಾಗಿರುವ ಗೇಟುಗಳ ಸಂಖ್ಯೆ ಎಷ್ಟು; ಅವು ಯಾವುವು ಮತ್ತು ಯಾವ ವರ್ಷದಿಂದ ಮುಚ್ಚಲಾಗಿದೆ? (ವಿವರ ನೀಡುವುದು). | ಅಣೆಕಟ್ಟಿನ +12 ಮಟ್ಟದ 08 ಸಂಖ್ಯೆಯ ಗೇಟುಗಳನ್ನು 2007- 08ನೇ ಸಾಲಿನಿಂದ ಶಾಶ್ವತವಾಗಿ ಮುಚ್ಚಲಾಗಿರುತ್ತದೆ.<br>ಅಣೆಕಟ್ಟಿನ +53 ಮಟ್ಟದ 04 ಸಂಖ್ಯೆಯ ಗೇಟುಗಳನ್ನು ಮೊದಲಿನಿಂದಲೂ ತೆರೆದಿರುವುದಿಲ್ಲ. |

**ಸಂಖ್ಯೆ: ಜಸಂಇ 46 ಡಿಎಸ್‌ಪಿ 2024**

**(ಡಿ. ಕೆ. ಶಿವಕುಮಾರ್)**
**ಉಪ ಮುಖ್ಯಮಂತ್ರಿಗಳು**

Scanned with OKEN Scanner